**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು**

ದಿನಾಂಕ: 03.06.2026

**ಪಾಟೀ ಸವಾಲು:-** ಶ್ರೀ ಕೆಬಿಕೆ 8ನೇ ಪ್ರತಿವಾದಿಯ ಪರ ವಕೀಲರಿಂದ

ಕೆಂಪಮ್ಮ ನನ್ನ ತಾಯಿ, ಅವರಿಗೆ 6ಜನ ಮಕ್ಕಳು. 1ನೇ ಪ್ರತಿವಾದಿ ನನ್ನ ತಾಯಿಯ ಅಕ್ಕ ಮಾರಕ್ಕನ ಮಗಳು 2 ಮತ್ತು 6ನೇ ಪ್ರತಿವಾದಿಗಳು ರಾಮಯ್ಯನ ಮಕ್ಕಳು ಎಂದರೆ ಸರಿ. ಗುರುಮೂರ್ತಿ ಮರಣ ಹೊಂದಿದ್ದು 2 ರಿಂದ 6ನೇ ಪ್ರತಿವಾದಿಗಳು ಅವರ ಮಕ್ಕಳು ಎಂದರೆ ಸರಿ. ನನ್ನ ತಾಯಿಯನ್ನು ಒಂದೇ ಊರಿಗೆ ಮದುವೆ ಮಾಡಿ ಕೊಡಲಾಗಿತ್ತು. ಗುರುಮೂರ್ತಿ ಮತ್ತು ರಾಮಯ್ಯ ಸಹೋದರರು ಎಂದರೆ ಸರಿ, ಸದರಿಯವರು ಮಾರಮ್ಮನ ಮಕ್ಕಳು ಎಂದರೆ ಸರಿ. ವೆಂಕಟಮ್ಮ ರವರು ಮರಣ ಹೊಂದಿದ್ದ ನಂತರ ಮಾರಮ್ಮ ರವರನ್ನು ವಾದಿಯ ತಂದೆ ರಾಮಯ್ಯ ಮದುವೆಯಾಗಿರುತ್ತಾರೆ ಎಂದರೆ ಸಾಕ್ಷಿಯು ಮರಣ ಹೊಂದುವ ಮೊದಲೇ ಮದುವೆಯಾಗಿದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿಯ ತಾಯಿ ವೆಂಕಟಮ್ಮ ರವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ತೋರಿಸಲು ಮರಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನನ್ನ ತಾಯಿ ಕೆಂಪಮ್ಮ ಚಿಕ್ಕವರಿದ್ದಾಗಲೇ ಅವರ ತಾಯಿ ಮರಣ ಹೊಂದಿರುತ್ತಾರೆ ಎಂದರೆ ನೆನಪಿಲ್ಲ. ವೆಂಕಟಮ್ಮರವರು ಮರಣ ಹೊಂದಿ ನಂತರ ಮಾರಮ್ಮರವರನ್ನು ವಾದಿಯ ತಂದೆ ರಾಮಯ್ಯ ರವರು ಮದುವೆಯಾಗಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯ ತಂದೆ ರಾಮಯ್ಯ ರವರು ಮರಣ ಹೊಂದಿದ ನಂತರ ಅವರ ಮಗ ರಾಮಯ್ಯರವರೇ ಒಟ್ಟು ಕುಟುಂಬದ ಸ್ವತ್ತುಗಳನ್ನು ನೋಡಿಕೊಳ್ಳುತಿದ್ದರು ಎಂದರೆ ಸಾಕ್ಷಿಯು ಎಲ್ಲರೂ ನೋಡಿಕೊಳುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿ ಮದುವೆಯಾದ ನಂತರ ನನ್ನ ತಂದೆಯ ಮನೆಯಲ್ಲಿ ಇದ್ದರು ಎಂದರೆ ಸರಿ. ರಾಮಯ್ಯ ರವರು ತನ್ನ ಸಹೋದರಿಯವರನ್ನು ಮದುವೆ ಮಾಡಿಕೊಟ್ಟ ನಂತರ ಎಲ್ಲಾ ಸ್ವತ್ತುಗಳನ್ನು ಅವರೇ ನೋಡಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನಾನು ಯಾವತ್ತು ದಾವಾ ಸ್ವತ್ತಿನಲ್ಲಿ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ.2ರ ಸ್ವತ್ತನ್ನು ದಿ: 08.02.1989 ರಂದು 2ನೇ ಪ್ರತಿವಾದಿ ರವರು ದ್ಯಾವೇನಹಳ್ಳಿ ಗ್ರಾಮದ ದೊಡ್ಡಪುಟ್ಟೇಗೌಡರವರ ಮಗ ರಂಗೇಗೌಡರಿಗೆ 24 ಸಾವಿರ ರೂಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಕಾರೇಹಳ್ಳಿಯಲ್ಲಿ ಮನೆ ಕಟ್ಟುವ ಉದ್ದೇಶದಿಂದ ರಾಮಯ್ಯ ರವರು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಧಾರದ ಮೇಲೆ 1989 ರಿಂದಲೂ ರಂಗೇಗೌಡ ಬಿನ್

ದೊಡ್ಡಪುಟ್ಟೇಗೌಡರವರ ಹೆಸರಿಗೆ ಖಾತೆ ಬದಲವಾಣೆಯಾಗಿ ಅವರೇ ಸ್ವಾಧೀನ ಇದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳಿದರು. ಸದರಿ ಸಂಬಂಧ ನಾನು ಆರ್.ಟಿ.ಸಿ ಹಾಗೂ ಇತರೆ ಕಂದಾಯ ದಾಖಲಾತಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ನಾವು ಸದರಿ ಸ್ವತ್ತಿನಲ್ಲಿ ಸ್ವಾಧೀನ ಇಲ್ಲದ ಕಾರಣ ಸದರಿ ದಾಖಲೆಗಳನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 26.08.1996 ರಲ್ಲಿ ದ್ಯಾವೇನಹಳ್ಳಿ ಗ್ರಾಮದ ರಂಗೇಗೌಡರು ಬೇರೆ ಕಡೆ ಜಮೀನು ಖರೀದಿ ಮಾಡುವ ಉದ್ದೇಶದಿಂದ ದ್ಯಾವೇನಹಳ್ಳಿ ಗ್ರಾಮದ ನಂಜುಂಡೇಗೌಡರ ಮಗ ಲಕ್ಷ್ಮೀಗೌಡರಿಗೆ 40ಸಾವಿರಕ್ಕೆ ದಾವಾ ಐಟಂ.2ರ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕಾರ ಕ್ರಯ ಪತ್ರ ಉಪನೊಂದಾಣಿ ಕಛೇರಿಯಲ್ಲಿ ಕ್ರಮಾಂಕ 673/96-97 ರಂತೆ ನೊಂದಾಣಿಯಾಗಿದ್ದು ಸದರಿ ಆಧಾರದ ಮೇಲೆ ಎಲ್ಲಾ ಕಂದಾಯ ದಾಖಲಾತಿಗಳು ಲಕ್ಷ್ಮೀಗೌಡರ ಹೆಸರಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದು ನನ್ನ ತಾಯಿಯವರು ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಪ್ರಕಾರ 1996-97 ರಿಂದ 98ರ ವರಿಗೂ ಲಕ್ಷ್ಮೀಗೌಡರು ಸದರಿ ಸ್ವತ್ತನ್ನು ಅಬದ್ದು ಮಾಡಿಕೊಂಡು ಸ್ವಾಧೀನ ಇದ್ದರು ಎಂದರೆ ನನಗೆ ಗೊತ್ತಿಲ್ಲ.

ದಿಃ 07.02.1998 ರಂದು ಸದರಿ ಲಕ್ಷ್ಮೀಗೌಡರವರು 8ನೇ ಪ್ರತಿವಾದಿರವರಿಗೆ 77 ಸಾವಿರ ರೂಗಳಿಗೆ ಮಾರಾಟ ಮಾಡಿದ್ದು ಅಂದಿನಿಂದಲೂ ಸದರಿಯವರು ಸ್ವಾಧೀನ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕಾರ ಕ್ರಯ ಪತ್ರ ಉಪನೊಂದಾಣಿ ಕಛೇರಿಯಲ್ಲಿ ಕ್ರಮಾಂಕ 1986/97-98 ರಂತೆ ನೊಂದಾಣಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಲಕ್ಷ್ಮೀಗೌಡರು ತನ್ನ ತಂಗಿಯ ಮದುವೆಯನ್ನು ಮಾಡುವ ಉದ್ದೇಶದಿಂದ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. 1998 ರಿಂದ ಎಲ್ಲಾ ರೆವಿನ್ಯೂ ದಾಖಲಾತಿಗಳು 8ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನನಗೆ ಓದಲು ಹಾಗೂ ಬರೆಯಲು ಬರುವುದಿಲ್ಲ. ಈ ಹಂತದಲ್ಲಿ ಸಾಕ್ಷಿಗೆ ನಿಪಿ-1ರಲ್ಲಿನ ಸಹಿ ಮತ್ತು ಸಾಕ್ಷಿಯ ಪ್ರಮಾಣ ಪತ್ರದಲ್ಲಿನ ಸಹಿಯನ್ನು ತೋರಿಸಿ ಅದರಲ್ಲಿನ ಸಹಿಗಳು ನಾನೇ ಮಾಡಿರುವುದು ಎಂದರೆ ಸಾಕ್ಷಿಯು ನೋಡಿ ಹೌದು ಎಂದು ನುಡಿದಿರುತ್ತಾರೆ. ಆದ ಕಾರಣ ನನಗೆ ಓದಲು ಬರೆಯಲು ಬರುತ್ತದೆ ಎಂದರೆ ಸಾಕ್ಷಿಯು ನನಗೆ ಸಹಿ ಮಾಡಲು ಮಾತ್ರ ಬರುತ್ತದೆ ಎಂದು ಹೇಳಿದರು. 1998 ರಿಂದ ಇಲ್ಲಿಯವರಿಗೂ ದಾವಾ ಐಟಂ.2ರ ಸ್ವತ್ತಿನ ಖಾತೆ ಹಾಗೂ ಎಲ್ಲಾ ರೆವಿನ್ಯೂ ದಾಖಲೆಗಳು 8ನೇ ಪ್ರತಿವಾದಿಯ ಹೆಸರಿಗೆ ಇದ್ದು ಅವರೇ ಸ್ವಾಧೀನ ಇದ್ದಾರೆ ಎಂದರೆ ಸುಳ್ಳು. ಸದರಿ ಸ್ವತ್ತಿನಲ್ಲಿ 8ನೇ ಪ್ರತಿವಾದಿ ಸುಮಾರು 10-15 ಲಕ್ಷ ರೂಗಳನ್ನು ಖರ್ಚು ಮಾಡಿ ಮನೆ ಕಟ್ಟಿ ವಾಸಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ 8ನೇ ಪ್ರತಿವಾದಿಯ ಹೆಸರಿಗೆ 11ಬಿ ಖಾತೆ ಗ್ರಾಮ ಪಂಚಾಯಿತಿಯಿಂದ ಇದೆ ಎಂದರೆ ನನಗೆ ಗೊತ್ತಿಲ್ಲ.

8ನೇ ಪ್ರತಿವಾದಿಯು ಸದರಿ ಮನೆಗೆ ವಿದ್ಯುತ್ ಸಂಪರ್ಕವನ್ನು ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿಗೆ 8ನೇ ಪ್ರತಿವಾದಿಯೇ ಕಂದಾಯ ಮತ್ತು ವಿದ್ಯೂತ್ ಶುಲ್ಕವನ್ನು ಪಾವತಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನಲ್ಲಿ ಬೋರ್ ವೆಲ್ ಕೊರೆಸಿ ಪೈಪ್ ನ್ನು 8ನೇ ಪ್ರತಿವಾದಿ ಹಾಕಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆದಾ ಕಾರಣ 8ನೇ ಪ್ರತಿವಾದಿಯು ಕ್ರಮಬದ್ಧ ಖರೀದಿದಾರರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ದಾವಾದಲ್ಲಿ ರಂಗೇಗೌಡ, ಲಕ್ಷ್ಮೀಗೌಡ, 8ನೇ ಪ್ರತಿವಾದಿರವರಿಗೆ ಆದಾ ಕ್ರಯ ಪತ್ರಗಳು ನಮಗೆ ಬದ್ಧಪಡಿಸಿರುವುದಿಲ್ಲ ಎಂದು ದಾವೆಯಲ್ಲಿ ಪರಿಹಾರ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಸದರಿ ಪರಿಹಾರವನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರಗಳ ನಡುವಳಿಕೆ ಸುಮಾರು 35 ವರ್ಷಗಳ ಹಿಂದೆಯೇ ನಡೆದಿರುವ ಕಾರಣ, ಇಲ್ಲಿಯವರಿಗೂ ಎಲ್ಲಿಯೂ ಪ್ರಶ್ನೆ ಮಾಡಿರದ ಕಾರಣ ಸದರಿ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 8ನೇ ಪ್ರತಿವಾದಿಯ ಹೆಸರಿಗೆ ಸೇರಿದ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಾನು ಮತ್ತು ಇತರೆ ಪ್ರತಿವಾದಿಗಳು ಷರೀಕ್ ಆಗಿ ಸದರಿ ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ ಕಾರಣ ದಾವೆಯಲ್ಲಿ ಕೇಳಿರುವಂತೆ ಪರಿಹಾರ ಪಡೆಯಲು ಅರ್ಹಲಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 3 ರಿಂದ 6ನೇ ಪ್ರತಿವಾದಿಯ ಪರ ವಕೀಲರು ಸಮಯ ಕೇಳಿದ್ದು ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ